ಪ್ರವಾಸೋದ್ಯಮ ಬಲಪಡಿಸುವುದು

293(530); ಶ್ರೀ ಪಾಟೀಲ್ ಜೆ.ಟಿ. (ಬೀಳಗಿ)

ಅ) ಬಾಗಲಕೋಟೆ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಬಲಪಡಿಸಲು ಕೈಗೊಂಡ ಕ್ರಮಗಳೇನು;

ಆ) ಕಳೆದ ಅಧಿವೇಶನದಲ್ಲಿ ಪ್ರವಾಸೋದ್ಯಮವನ್ನು ಬಲಪಡಿಸಲು ಹೊಸಪೇಟೆ, ಬಾದಾಮಿ, ಕೂಡಲ ಸಂಗಮ, ಚಿಕ್ಕಸಂಗಮ, ವಿಜಯಪುರ, (ಬಿಜಾಪುರ) ಇವುಗಳ ಮಧ್ಯೆ ಕಾರಿಡಾರ್ ನಿರ್ಮಾಣ ಮಾಡಿ ಪ್ರವಾಸೋದ್ಯಮವನ್ನು ಬಲಪಡಿಸಲು ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಚಾಲುಕ್ಯರ ಹೆಸರಿನಲ್ಲಿ ಹಬ್ಬವನ್ನು ಹುಟ್ಟುಹಾಕಿ ಅಂತರರಾಷ್ಟ್ರೀಯ ಹಾಗೂ ದೇಶೀಯ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಲು ಮೂಲಭೂತ ಸೌಕರ್ಯ ಒದಗಿಸಲು ಕಳೆದ ಅಧಿವೇಶನದಲ್ಲಿ ಸರ್ಕಾರವನ್ನು ಒತ್ತಾಯಿಸಿದ್ದು ಈ ದಿಕ್ಕಿನಲ್ಲಿ ಇಲ್ಲಿಯವರೆಗೆ ಸಾಧಿಸಿದ ಪ್ರಗತಿ ಏನು;

ಈ) ಚಿಕ್ಕಸಂಗಮ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿದಲ್ಲಿ ಇದೊಂದು ಅಂತರ ರಾಷ್ಟ್ರೀಯ ಪ್ರವಾಸೋದ್ಯಮ ಕೇಂದ್ರವಾಗಲು ಎಲ್ಲಾ ರೀತಿಯ ಅವಕಾಶಗಳಿದ್ದು ಹಾಗೂ ಅರ್ಹತೆ ಹೊಂದಿದ್ದು, ಇದನ್ನು ಅಂತರ ರಾಷ್ಟ್ರೀಯ ಪ್ರವಾಸೋದ್ಯಮ ಕೇಂದ್ರವನ್ನಾಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ಬಾಗಲಕೋಟೆ ಜಿಲ್ಲೆಯಲ್ಲಿ ಬಾಗಲಕೋಟೆ, ಬಾದಾಮಿ, ಜಮಖಂಡಿ, ಹುನಗುಂದ ಮುದೋಳ ಹಾಗೂ ಬೀಳಗಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬರುವ ಪ್ರವಾಸಿ ತಾಣಗಳಲ್ಲಿ, ಯಾತ್ರಿನಿವಾಸ, ಡಾರ್ಮಿಟರಿ ವಸತಿ, ಶೌಚಾಲಯಗಳ ನಿರ್ಮಾಣ, ಮೆಟ್ಟಿಲುಗಳ ನಿರ್ಮಾಣ, ಬೆಂಚುಗಳ

ವ್ಯವಸ್ಥೆ, ಲ್ಯಾಂಡ್ ಸ್ಕೇಪಿಂಗ್ ಮುಂತಾದ 35 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಇವು ವಿವಿಧ ಹಂತಗಳಲ್ಲಿರುತ್ತವೆ.

ಆ) ಕಾರಿಡಾರ್ ನಿರ್ಮಾಣ ಪ್ರವಾಸೋದ್ಯಮ ಇಲಾಖೆಯ ವ್ಯಾಪ್ತಿಗೆ ಬರುವುದಿಲ್ಲ.

ಇ) ಚಾಲುಕ್ಯ ಉತ್ಸವ ಆಚರಣೆಗಾಗಿ ಜಿಲ್ಲಾಧಿಕಾರಿಗಳಿಗೆ 2013–14ನೇ ಸಾಲಿನಲ್ಲಿ ರೂ. 10.00 ಲಕ್ಷಗಳನ್ನು ಹಾಗೂ 2014–15ನೇ ಸಾಲಿನಲ್ಲಿ ರೂ. 25.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಅನುದಾನ ಲಭ್ಯತೆಗನುಸಾರವಾಗಿ ಬಾಗಲಕೋಟೆ ಜಿಲ್ಲೆಯಲ್ಲಿರುವ 35 ವಿವಿಧ ಪ್ರವಾಸಿ ತಾಣಗಳಲ್ಲಿ ಮೂಲಸೌಲಭ್ಯಗಳನ್ನು ಕಲ್ಪಿಸಲು ಈಗಾಗಲೇ ಪ್ರಶ್ನೆ ಸಂಖ್ಯೆ (ಅ) ರಲ್ಲಿ ಉತ್ತರಿಸಿರುವಂತೆ ಕ್ರಮ ವಹಿಸಲಾಗಿದೆ.

ಈ) ಚಿಕ್ಕ ಸಂಗಮ ಕ್ಷೇತ್ರದಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ರೂ. 40.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಡಾರ್ಮಿಟರಿ ನಿರ್ಮಾಣ ಕಾಮಗಾರಿಯನ್ನು 2013–14ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿ ಕೈಗೊಳ್ಳಲಾಗಿದೆ. ಕಾಮಗಾರಿ ಪ್ರಗತಿಯಲ್ಲಿದೆ.

ಈ ಕ್ಷೇತ್ರವನ್ನು ಅಂತರರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿಪಡಿಸುವಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.